THE NEW
INDIAN
EXPRESS
MANGALURU • THURSDAY • SEPTEMBER 20, 2018 • ₹6.00 • PAGES 16 • CITY EDITION

Sahyadri College of Engineering & Management
CENTRAL
LIBRARY
Adyar, Mangaluru-7



# '90% drug-related cases involve students'

ENS @ Mangaluru

DRAWING attention to the issue of substance abuse problem among youth, Assistant Commissioner of Police (Mangalore South Sub-Division) Rama Rao, on Wednesday, said among the cases he handled relating to drugs, 90% of those involved were students.

Rao shared this at the awareness talk on Substance Abuse, Anti- Ragging, and Cyber Crime Laws organised by Department of Academics and NSS division of Sahyadri College of Engineering and Management in collaboration with the Police Department for its first year engineering students.

"Drugs weaken the society and those involved in it are doing a crime against the society," he said, encouraging the the student fraternity and teachers to help curb the menace. Also speaking about ragging, Rao said laws including the NDPA and various sections of the Indian Penal Codes are increasingly being used to deal with these crimes.

Speaking about the increased role of technology in solving cyber crime, Rao explained about Call Details Records, a means to use mobile phones to track the culprits and solve crime. Bhajantri, Inspector, Mangalore Rural Police Station spoke about the effects of substance abuse and reminded the youth about their purpose as students of the institute.


Rajesha, dean of academics encouraged students to report crimes against them or their friends to the anti-ragging committee and squad, a mechanism established in the college to curb substance abuse, ragging and cyber crime. Principal Srinivas Rao Kunte and Devadas Hegde, Trustee, Bhandary Foundation were present.

ಗುರುವಾರ 20.9.2018
• ಬೆಂಗಳೂರು • ಬೆಳಗಾವಿ • ಶಿವಮೊಗ್ಗ
• ಹುಬ್ಬಳ್ಳಿ • ಮಂಗಳೂರು • ಕಲಬುರಗಿ
ಸಂಪುಟ 52 • ಸಂಚಿಕೆ 261 • ಪುಟ 12+4 • ಬೆಲೆ ₹5
epaper.kannadaprabha.in

ಪಾಕ್ ಮಾಜಿ ಪ್ರಧಾನಿ ನವಾಜ್ ಷರೀಫ್ ಸದ್ಯ ಜೈಲಿಂದ ಪಾರು 9

ಪ್ರೊ ಕಬಡ್ಡಿ ವಿರು
ಬಂಡಾಯ ಕಬ

ಕನ್ನಡಪ್ರಭ
ನೇರ.ದಿಟ್ಟ.ನಿರಂತರ



ಇಂದಿನ ಸ್ಪೆಷಲ್!
ಪುರವಣಿಯಲ್ಲಿಂದು
ಎರಡು 'ಚಾಪ್ಟರ್'ಗಳಲ್ಲಿ
ಲಿರುವ ಬಹುನಿರೀಕ್ಷಿತ
ಮುಂದಿನ ವರ್ಷ ತೆರೆಗೆ.
ಬಿಡುಗಡೆ: ನಿರ್ಮಾಪಕ,

**ಮಾಹಿತಿ ಕಾರ್ಯಕ್ರಮ** | ಅಪರಾಧಗಳ ಬಗ್ಗೆ ವಿದ್ಯಾರ್ಥಿಗಳು ಜಾಗೃತರಾಗಬೇಕು: ರಾಮರಾವ್

# ಸಹ್ಯಾದ್ರಿ ಕಾಲೇಜಲ್ಲಿ ಮಾದಕದ್ರವ್ಯ ದುರುಪಯೋಗ ಜಾಗೃತಿ ಕಾರ್ಯಕ್ರಮ

• **ಕನ್ನಡಪ್ರಭ ವಾರ್ತೆ** ಮಂಗಳೂರು

ನಗರ ಪೊಲೀಸ್ ಕಮಿಷನರೇಟ್ ಸಹಯೋಗದಲ್ಲಿ ಅಡ್ಯಾರಿನ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಕಾಲೇಜಿನ ಶೈಕ್ಷಣಿಕ ಮತ್ತು ಎಂಜಿನಿಯರಿಂಗ್ ವಿಭಾಗದಿಂದ ಮೊದಲ ವರ್ಷದ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಮಾದಕದ್ರವ್ಯದ ಪದಾರ್ಥಗಳ ದುರ್ಬಳಕೆ ಮತ್ತು ಸೈಬರ್ ಅಪರಾಧ ಕಾನೂನು ವಿಷಯಗಳ ಬಗ್ಗೆ ಚರ್ಚೆ ಮತ್ತು ಜಾಗೃತಿ ಕಾರ್ಯಕ್ರಮ ನಡೆಯಿತು.

ಮಂಗಳೂರು ದಕ್ಷಿಣ.ಎಸಿಪಿ ರಾಮರಾವ್ ಮತ್ತು ಮಂಗಳೂರು ಗ್ರಾಮಾಂತರ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಭಜಂತ್ರಿ ಅವರು ವಿದ್ಯಾರ್ಥಿಗಳ ದುರ್ಬಳಕೆ, ರ್‍ಯಾಗಿಂಗ್ ಮತ್ತು ಸೈಬರ್ ಅಪರಾಧದ ದುಷ್ಪರಿಣಾಮಗಳ ಬಗ್ಗೆ ಮಾತನಾಡಿದರು.

ಮಾದಕವಸ್ತುವಿನ ದುರ್ಬಳಕೆ, ರ್‍ಯಾಗಿಂಗ್ ಮತ್ತು ಸೈಬರ್ ಅಪರಾಧಗಳ ಹಾನಿಯನ್ನು ತಡೆಯುವಲ್ಲಿ ವಿದ್ಯಾರ್ಥಿಗಳ ಮತ್ತು ಶಿಕ್ಷಕರ ಮಹತ್ತರ ಪಾತ್ರವಿದೆ. ನಾವು ಪತ್ತೆಮಾಡಿದ ಪ್ರಕರಣಗಳಲ್ಲಿ ಶೇ.90ರಷ್ಟು ವಿದ್ಯಾರ್ಥಿಗಳೇ ಒಳಗೊಂಡಿರುತ್ತಾರೆ. ಇದರ ಬಗ್ಗೆ ವಿದ್ಯಾರ್ಥಿ ಸಮೂಹ ಜಾಗೃತವಾಗಿರಬೇಕು ಎಂದು ಎಸಿಪಿ ರಾಮ ರಾವ್ ಹೇಳಿದರು.




ಸಹ್ಯಾದ್ರಿ ಕಾಲೇಜಲ್ಲಿ ಮಾದಕದ್ರವ್ಯ ದುರುಪಯೋಗ ಜಾಗೃತಿ ಕಾರ್ಯಕ್ರಮ ನಡೆಯಿತು.

ಇನ್‌ಸ್ಪೆಕ್ಟರ್ ಭಜಂತ್ರಿ ಅವರು ಸೈಬರ್ ಅಪರಾಧಗಳ ಬಗ್ಗೆ ಮಾತನಾಡುತ್ತಾ, ಮೊಬೈಲ್ ಫೋನ್‌ಗಳ ಕಾಲ್ ರೆಕಾರ್ಡ್ಸ್ ವಿವರಗಳು ಅಪರಾಧವನ್ನು ಪರಿಹರಿಸಲು ಮತ್ತು ಅಪರಾಧಿಗಳನ್ನು ಪತ್ತೆಹಚ್ಚಲು ಹೇಗೆ ಬಳಸಿಕೊಳ್ಳಬಹುದು ಎಂದು ವಿವರಿಸಿದರು.

ಅಕಾಡೆಮಿಕ್ ಡೀನ್ ಡಾ. ರಾಜೇಶ್ ಅವರು, ಕಾಲೇಜಿನಲ್ಲಿ ವಸ್ತುವಿನ ದುರ್ಬಳಕೆ, ರ್‍ಯಾಗಿಂಗ್ ಮತ್ತು ಸೈಬರ್ ಅಪರಾಧವನ್ನು ನಿಗ್ರಹಿಸುವ ವ್ಯವಸ್ಥೆಯನ್ನು ವಿವರಿಸಿದರು. ಕಾಲೇಜಿನಲ್ಲಿ ಆ್ಯಂಟಿ ರ್‍ಯಾಗಿಂಗ್ ಸಮಿತಿಯನ್ನು ರಚಿಸಲಾಗಿದೆ. ರ್‍ಯಾಗಿಂಗ್ ಸಂಭವಿಸಿದರೆ, ಮೊದಲು ಸಮಿತಿ ಗಮನಕ್ಕೆ ತರುವಂತೆ ವಿದ್ಯಾರ್ಥಿಗಳನ್ನು ವಿನಂತಿಸಿದರು.

ಸಹ್ಯಾದ್ರಿ ಕಾಲೇಜ್ ಪ್ರಾಂಶುಪಾಲ ಡಾ. ಶ್ರೀನಿವಾಸ್ ರಾವ್ ಕುನ್ಸೆ ಅಧ್ಯಕ್ಷತೆ ವಹಿಸಿದ್ದರು. ಟ್ರಸ್ಟಿ ದೇವದಾಸ್ ಹೆಗ್ಡೆ, ಆಡಳಿತ ಕಚೇರಿಯ ಅಕಾಡೆಮಿಕ್ ಶ್ರೀಲತಾ ಇದ್ದರು.

ಗುರುವಾರ, ಸೆಪ್ಟೆಂಬರ್ 20, 2018 | ₹ 5.00
www.prajavani.net
/prajavani.net

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

Sahyadri College of Engineering & Management
CENTRAL LIBRARY

**ಮಂದಹಾಸ**
ಮುಂಬೈನಲ್ಲಿ ನಡೆದ '34ನೇ ಪ್ರಿಯದರ್ಶಿನಿ ಗ್ಲೋಬಲ್ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅನುಷ್ಕಾ ಶರ್ಮಾ ನೋಟ

## ಸಹ್ಯಾದ್ರಿ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಮಾಹಿತಿ ಶಿಬಿರ

# ಅಪರಾಧ ತಡೆ: ಶಿಕ್ಷಕರ ಪಾತ್ರ ಮಹತ್ತರ

ಪ್ರಜಾವಾಣಿ ವಾರ್ತೆ

ಮಂಗಳೂರು: ಮಾದಕ ವಸ್ತುಗಳ ದುರ್ಬಳಕೆ, ರ‍್ಯಾಗಿಂಗ್ ಮತ್ತು ಸೈಬರ್ ಅಪರಾಧಗಳ ಹಾನಿಯನ್ನು ತಡೆಯುವಲ್ಲಿ ವಿದ್ಯಾರ್ಥಿಗಳ ಮತ್ತು ಶಿಕ್ಷಕರ ಪಾತ್ರ ಮಹತ್ತರವಾಗಿದೆ ಎಂದು ಎಸಿಪಿ ಕೆ. ರಾಮರಾವ್ ಹೇಳಿದರು.

ಜಿಲ್ಲಾ ಪೊಲೀಸ್ ಇಲಾಖೆಯ ಸಹಯೋಗದಲ್ಲಿ ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್‌ನ ಶೈಕ್ಷಣಿಕ ಮತ್ತು ಎಂಜಿನಿಯರಿಂಗ್ ವಿಭಾಗದ ಮೊದಲ ವರ್ಷದ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಬುಧವಾರ ಆಯೋಜಿಸಿದ್ದ ಮಾದಕ ದ್ರವ್ಯದ ದುರ್ಬಳಕೆ ಮತ್ತು ಸೈಬರ್ ಅಪರಾಧ ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮಾದಕವ್ಯಸನದಿಂದ ವಿದ್ಯಾರ್ಥಿಗಳ ಮೇಲೆ ಆಗುವ ದೈಹಿಕ ಮತ್ತು ಮಾನಸಿಕ ಪ್ರಭಾವವನ್ನು ವಿವರಿಸಿದ ಅವರು, ಸೈಬರ್ ಅಪರಾಧಗಳನ್ನು ಪತ್ತೆ ಮಾಡುವ ಸಂದರ್ಭದಲ್ಲಿ ಮೊಬೈಲ್ ಫೋನ್‌ಗಳನ್ನು ಹೇಗೆ ಬಳಸಿಕೊಳ್ಳಬಹುದು ಎಂದರು.


**ಮುಖ್ಯಾಂಶಗಳು**

- ಮಾದಕ ದ್ರವ್ಯ ಪಿಡುಗಿನಿಂದ ವಿದ್ಯಾರ್ಥಿ ಜೀವನ ಹಾಳು
- ಜ್ಞಾನಾರ್ಜನೆಯ ಉದ್ದೇಶ ಈಡೇರಿಸಿಕೊಳ್ಳಲು ಪ್ರಯತ್ನಿಸಿ
- ರ‍್ಯಾಗಿಂಗ್ ತಡೆ ಸಮಿತಿ ರಚನೆ: ಮಾಹಿತಿ ನೀಡಲು ಸಲಹೆ

**ಸಮಾಜದ ಕೆಲವೇ ಕೆಲವು ಜನರು ಅಪರಾಧ ಕೃತ್ಯಗಳಲ್ಲಿ ತೊಡಗಿದ್ದು, ಸಮಾಜದ ಸ್ವಾಸ್ಥ್ಯವನ್ನು ಕೆಡಿಸುತ್ತಾರೆ. ಅಂಥವರ ಬಗ್ಗೆ ಜಾಗೃತಿ ವಹಿಸಬೇಕು.**

**ಕೆ.ರಾಮರಾವ್** ಎಸಿಪಿ

ಮಂಗಳೂರು ಗ್ರಾಮಾಂತರ ಠಾಣೆ ಇನ್‌ಸ್ಪೆಕ್ಟರ್ ಭಜಂತ್ರಿ ಮಾತನಾಡಿ, ವಿದ್ಯಾರ್ಥಿಗಳು ಜ್ಞಾನಾರ್ಜನೆಗಾಗಿ ಕಾಲೇಜಿಗೆ ಬರುತ್ತಿದ್ದು, ಉದ್ದೇಶವನ್ನು ಅರ್ಥ ಮಾಡಿಕೊಂಡು ಬದುಕಿನಲ್ಲಿ ಯಶಸ್ವಿ ಆಗಬೇಕು ಎಂದು ಸಲಹೆ ನೀಡಿದರು.




ಮಂಗಳೂರಿನ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಬುಧವಾರ ಆಯೋಜಿಸಿದ್ದ ಮಾಹಿತಿ ಶಿಬಿರದಲ್ಲಿ ಎಸಿಪಿ ಕೆ. ರಾಮರಾವ್ ಮಾತನಾಡಿದರು.

ಶೈಕ್ಷಣಿಕ ಮಂಡಳಿ ಡೀನ್ ಡಾ. ರಾಜೇಶ್ ಮಾತನಾಡಿ, 'ನಮ್ಮ ಕಾಲೇಜಿನಲ್ಲಿ ವಸ್ತುವಿನ ದುರ್ಬಳಕೆ, ರ‍್ಯಾಗಿಂಗ್ ಮತ್ತು ಸೈಬರ್ ಅಪರಾಧವನ್ನು ನಿಗ್ರಹಿಸುವ ವ್ಯವಸ್ಥೆ ಅಳವಡಿಸಿದ್ದು, ಕಾಲೇಜುಗಳಲ್ಲಿ ರ‍್ಯಾಗಿಂಗ್ ತಡೆ ಸಮಿತಿ ಮತ್ತು ತಂಡವನ್ನು ರಚಿಸಲಾಗಿದೆ. ವಿದ್ಯಾರ್ಥಿಗಳು ತಮಗೆ ಅಥವಾ ತಮ್ಮ ಗೆಳೆಯರಿಗೆ ಅಪಾಯಕಾರಿ ಆಗುವ ಯಾವುದೇ ಘಟನೆಗಳು ಸಂಭವಿಸಿದಲ್ಲಿ ಸಮಿತಿಗೆ ವರದಿ ಮಾಡಬೇಕು' ಎಂದು ಸಲಹೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಸಹ್ಯಾದ್ರಿ ಕಾಲೇಜಿನ ಪ್ರಾಂಶುಪಾಲ ಡಾ. ಶ್ರೀನಿವಾಸ್ ರಾವ್ ಕುನ್ನೆ ಮಾತನಾಡಿ, ಮಾದಕ ವಸ್ತುವಿನ ದುರ್ಬಳಕೆ, ರ‍್ಯಾಗಿಂಗ್ ತಡೆ ಮತ್ತು ಸೈಬರ್ ಕ್ರೈಂ ದುಷ್ಪರಿಣಾಮಗಳ ವಿರುದ್ಧ ವಿದ್ಯಾರ್ಥಿಗಳನ್ನು ಒಟ್ಟಾಗಿ ಹೋರಾಡಬೇಕು ಎಂದರು.

ಭಂಡಾರಿ ಫೌಂಡೇಶನ್ ಟ್ರಸ್ಟಿ ದೇವದಾಸ್ ಹೆಗ್ಡೆ ಮಾತನಾಡಿದರು. ಅಕಾಡೆಮಿಕ್ ಆಡಳಿತಾತ್ಮಕ ಕಚೇರಿಯ ಶ್ರೀಲತಾ ಕಾರ್ಯಕ್ರಮ ಸಂಘಟಿಸಿದ್ದರು. ಕ್ಯಾಲಿಡಾ ರಾಯ್ಸ್ ಡಿಸೋಜ ಕಾರ್ಯಕ್ರಮ ಆಯೋಜಿಸಿದ್ದರು. ವಿದ್ಯಾರ್ಥಿ ಕಲ್ಯಾಣ ಅಧಿಕಾರಿ ರಾಸ್ಮಿತಾ ಗಿರೀಶ್ ನಿಶಾಲ್ ವಂದಿಸಿದರು.

ಸಂಪುಟ Volume 60 | ಸಂಚಿಕೆ Issue 236 | ಪುಟ Pages 12+4

epaper.samyukthakarnataka.com

ಮಂಗಳೂರು Mangaluru | ಹುಬ್ಬಳ್ಳಿ Hubballi | ಬೆಂಗಳೂರು Bangaluru | ಕಲಬುರಗಿ Kalaburagi | ದಾವಣಗೆರೆ Davanagere




# ಸಂಯುಕ್ತ ಕರ್ನಾಟಕ


samyukthakarnataka

ಕನ್ನಡಿಗರ ಸಾಕ್ಷಿಪ್ರಜ್ಞೆ

ಎಂಟು ದಶಕದ ನಂಟು


ಬಾಲಿವುಡ್‌ನ ಹಿರಿಯ ನಟಿ ರಾಜ್ಯಸಭಾ ಸದಸ್ಯೆ ಶಬಾನಾ ಆಜ್ಮಿ ತಮ್ಮ 67ನೇ ಜನ್ಮದಿನವನ್ನು ಸಂಭ್ರಮದಿಂದ ಆಚರಿಸಿಕೊಂಡರು......


ಗುರುವಾರ Thursday | ಸೆಪ್ಟೆಂಬರ್ 20-2018 September | ₹ 5-00


ಖ್ಯಾತನಟಿ ಫಾತಿಮಾ ಸನಾ ಅಮೀರ್‌ಖಾನ್ ನಿರ್ಮಾಣದ ಥಗ್ ಜಫಿರಾ ಚಿತ್ರದಲ್ಲಿ ನಾಯಕಿ ನಟಿಯಾಗಿ ಅಭಿನಯಿಸುತ್ತಿದ್ದಾರೆ. ಇದು ೮೦ರ ದಶಕದಲ್ಲಿ ಅಮಿತಾಬ್ ನಟಿಸಿದ್ದ ಥಗ್ ಹಿಂದೂಸ್ತಾನ್‌ನ ಮುಂದುವರಿದ ಭಾಗ ಎಂದೇ ಹೇಳಲಾಗುತ್ತಿದೆ......




ಮಂಗಳೂರು: ದ.ಕ. ಜಿಲ್ಲಾ ಪೊಲೀಸ್ ಇಲಾಖೆಯ ಸಹಯೋಗದೊಂದಿಗೆ ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್‌ನ ಮೊದಲ ವರ್ಷದ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಮಾದಕ ದ್ರವ್ಯ ಪದಾರ್ಥಗಳ ದುರ್ಬಳಕೆ ಮತ್ತು ಸೈಬರ್ ಅಪರಾಧ ಕಾನೂನು ವಿಷಯಗಳ ಬಗ್ಗೆ ಚರ್ಚೆ ಮತ್ತು ಜಾಗೃತಿ ಕಾರ್ಯಕ್ರಮ ನಡೆಯಿತು. ಮಂಗಳೂರು ದಕ್ಷಿಣ ಉಪ ವಿಭಾಗದ ಸಹಾಯಕ ಕಮೀಷನರ್ ಕೆ. ರಾಮರಾವ್ ಮತ್ತು ಮಂಗಳೂರು ಗ್ರಾಮಾಂತರ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಭಜಾಂತ್ರಿ ಮಾಹಿತಿ ನೀಡಿದರು.

ರಿಜಿಡ್ ಪಿ.ವಿ.ಸಿ.
ಶ್ರೀಕೃಷ್ಣ ಪೈಪ್ಸ್

ಉದಯವಾಣಿ
ಜನಮನದ ಜೀವನಾಡಿ
ಮಣಿಪಾಲ । ಬೆಂಗಳೂರು । ಹುಬ್ಬಳ್ಳಿ । ಕಲಬುರಗಿ । ದಾವಣಗೆರೆ । ಮುಂಬಯಿ

BEST OFFER
ANSHA SU
Karkala
Anniversary Sp
Visit Us
ALL NEEDS U

Regd.No.UDP/1259/2018-20 | udayavani.com | UDAYAVANI – KANNADA DAILY – MANIPAL ಮಣಿಪಾಲ, ಗುರುವಾರ, ಸೆಪ್ಟಂಬರ್ 20, 2018 ಬೆಲೆ: ₹ 5-00 ವಿದೇಶ ಬೆಲೆ: ₹ 6-00 ಪುಟಗಳು

**ಶಿಕ್ಷಣ** | ಸೈಬರ್ ಅಪರಾಧ ಕಾನೂನು ಮಾಹಿತಿ ಶಿಬಿರ

# ಅಪರಾಧ ತಡೆಯಲು ಸಹಕರಿಸಿ: ರಾಮರಾವ್

**ಮಹಾನಗರ,** ಸೆ. 19: ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್‌ನ ಶೈಕ್ಷಣಿಕ ಮತ್ತು ಎಂಜಿನಿಯರಿಂಗ್ ವಿಭಾಗವು ಜಿಲ್ಲಾ ಪೊಲೀಸ್ ಇಲಾಖೆಯ ಸಹಯೋಗದೊಂದಿಗೆ ಕಾಲೇಜಿನ ಮೊದಲ ವರ್ಷದ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ 'ಮಾದಕದ್ರವ್ಯ ಪದಾರ್ಥಗಳ ದುರ್ಬಳಕೆ, ಮತ್ತು ಸೈಬರ್ ಅಪರಾಧ ಕಾನೂನು' ವಿಷಯದ ಬಗ್ಗೆ ಚರ್ಚೆ ಮತ್ತು ಜಾಗೃತಿ ಕಾರ್ಯಕ್ರಮ ಆಯೋಜಿಸಿತ್ತು.

ಪೊಲೀಸ್ ಇಲಾಖೆ ಮಂಗಳೂರು ದಕ್ಷಿಣ ಉಪ ವಿಭಾಗದ ಸಹಾಯಕ ಕಮೀಷನರ್ ಕೆ. ರಾಮರಾವ್ ಮಾತನಾಡಿ, ಮಾದಕದ್ರವ್ಯಕ್ಕೆ ಸಂಬಂಧಿಸಿದ ಪ್ರಕರಣಗಳಲ್ಲಿ ಪೊಲೀಸ್ ಇಲಾಖೆ ತೆಗೆದುಕೊಂಡ ಕಾನೂನು ಕ್ರಮಗಳ ಕುರಿತು ತಮ್ಮ ಅನುಭವ ಹಂಚಿಕೊಂಡರು. ಮಾದಕ ದ್ರವ್ಯಗಳ ದುರ್ಬಳಕೆ ಮತ್ತು ರ್‍ಯಾಗಿಂಗ್‌ಗೆ ಸಂಬಂಧಿಸಿದ ಅಪರಾಧಗಳಿಗೆ ಭಾರತೀಯ ದಂಡ ಸಂಹಿತೆಯ ಬೇರೆ ಬೇರೆ ಸೆಕ್ಷನ್‌ಗಳು ಅನ್ವಯಿಸುತ್ತವೆ ಎಂದರು.




**ಸಹಾಯಕ ಕಮಿಷನರ್ ಕೆ. ರಾಮರಾವ್ ಅವರು ಮಾತನಾಡಿದರು.**

ಮಾದಕ ವಸ್ತುವಿನ ದುರ್ಬಳಕೆ, ರ್‍ಯಾಗಿಂಗ್ ಮತ್ತು ಸೈಬರ್ ಅಪರಾಧಗಳ ಹಾನಿ ತಡೆಯುವಲ್ಲಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಮಹತ್ತರ ಜವಾಬ್ದಾರಿ ವಹಿಸಬೇಕು. ಮಾದಕ ವಸ್ತುಗಳ ವ್ಯಸನದಿಂದ ವಿದ್ಯಾರ್ಥಿಗಳ ಮೇಲೆ ದೈಹಿಕ ಮತ್ತು ಮಾನಸಿಕವಾಗಿ ಆಗುವ ದುಷ್ಪರಿಣಾಮಗಳ ಬಗ್ಗೆ ಅವರು ಜಾಗೃತಿ ಮೂಡಿಸಿದರು.

ಮಂಗಳೂರು ಗ್ರಾಮಾಂತರ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಭಜಾಂತ್ರಿ, ವಿದ್ಯಾರ್ಥಿಗಳ ದುರ್ಬಳಕೆ, ರ್‍ಯಾಗಿಂಗ್ ಮತ್ತು ಸೈಬರ್ ಅಪರಾಧಗಳ ದುಷ್ಪರಿಣಾಮಗಳ ಬಗ್ಗೆ ಮಾತನಾಡಿದರು.

ಸಹ್ಯಾದ್ರಿ ಕಾಲೇಜಿನ ಪ್ರಾಂಶುಪಾಲ ಡಾ| ಶ್ರೀನಿವಾಸ್ ರಾವ್ ಕುನ್ಪೆ, ಮಾದಕ ವಸ್ತುವಿನ ದುರ್ಬಳಕೆ, ಆ್ಯಂಟಿ-ರ್‍ಯಾಗಿಂಗ್ ಮತ್ತು ಸೈಬರ್ ಕ್ರೈಮ್ ದುಷ್ಪರಿಣಾಮಗಳ ವಿರುದ್ಧ ವಿದ್ಯಾರ್ಥಿಗಳನ್ನು ಒಗ್ಗೂಡಿಸಲು ಒತ್ತಾಯಿಸಿದರು.

ಭಂಡಾರಿ ಫೌಂಡೇಶನ್‌ನ ದೇವದಾಸ್ ಹೆಗ್ಡೆ ಅಕಾಡೆಮಿಕ್ ಆಡಳಿತಾತ್ಮಕ ಕಚೇರಿಯ ಶ್ರೀಲತಾ ಮತ್ತು ಎನ್ನೆಸ್ಸೆಸ್ ಸಂಯೋಜಕರು ನೇತೃತ್ವ ವಹಿಸಿದ್ದರು. ವಿದ್ಯಾರ್ಥಿ ಕಲ್ಯಾಣಾಧಿಕಾರಿ ರಾಸ್ಮಿತಾ ಗಿರೀಶ್ ನಿಶಾಲ್ ಅವರು ಕಾರ್ಯಕ್ರಮ ವಂದಿಸಿದರು.